**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ**
**ಚನ್ನಪಟ್ಟಣ**

C C No. 1028/2014

CW. 3 PW.2

**ಹೆಸರು : ಆಸಿಫ್ ಉಲ್ಲಾ ಖಾನ್**
**ತಂದೆ/ಗಂಡ : ಲೇಟ್ ಮೆಹಬೂಬ್ ಖಾನ್**
**ವಯಸ್ಸು : 39 ವರ್ಷ**
**ಉದ್ಯೋಗ : ಖಾಸಗಿ ಕೆಲಸ**
**ವಾಸ** : ಮಲ್ಲಯ್ಯನ ದೊಡ್ಡಿ, ಚನ್ನಪಟ್ಟಣ.

ಸಾಕ್ಷಿಯನ್ನು ಕರೆಸಲಾಯಿತು, ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯ ವಿಚಾರಣೆ ಎಪಿಪಿ ಯವರಿಂದಃ ದಿ.08.11.2019.

ನಿಪಿ-1 ರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ, ಅದನ್ನು ನಿಪಿ-1ಬಿ ಎಂದು ಗುರುತಿಸಲಾಯಿತು. ಅಂದಾಜು 5-6 ವರ್ಷದ ಹಿಂದೆ ಚನ್ನಪಟ್ಟಣ ಪೂರ್ವ ಠಾಣೆಯಲ್ಲಿ ನಿಪಿ-1ಕ್ಕೆ ಪೋಲೀಸರ ಕೋರಿಕೆಯ ಮೇರೆಗೆ ಸಹಿ ಹಾಕಿರುತ್ತೇನೆ. ಆರೋಪಿಯನ್ನು ನೋಡಿರುವುದಿಲ್ಲ. ನನ್ನ ಸಮಕ್ಷಮ ಪೋಲೀಸರು ಏನನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನಿಪಿ-1 ರಲ್ಲಿರುವ ಅಂಶಗಳು ಗೊತ್ತಿಲ್ಲ. ನಾನು ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಲಾಯಿತು. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಎ ಪಿ ಪಿ ಯವರಿಂದ**

ಚಾಸಾ-1 ರವರಿಗೆ ಬಂದ ಖಚಿತ ಮಾಹಿತಿ ಚನ್ನಪ್ಪಣ ನಿಜಾಮಿ ಚೌಕಲ್ ಇಸ್ಲಾಮ್ ಪುರ ಮೊಹಲ್ಲಾದಲ್ಲಿ ಅಕ್ರಮವಾಗಿ ಗ್ರಾಹಕರಿಗೆ ವಿತರಣೆ ಆಗಬೇಕಿದ್ದ ನೀಲಿ ಸೀಮೆ ಎಣ್ಣೆ ಮಾರಾಟ ಮಾಡುತ್ತಿದ್ದಾರೆ ಎಂದು ಅವರು ಮತ್ತು

ಸಿಬ್ಬಂದಿಗಳು ಸ್ಥಳಕ್ಕೆ ದಾಳಿ ಮಾಡಲು ನನ್ನನ್ನು ಪಂಚರಾಗಿ ಬರಬೇಕಂದು ಕೋರಿದರು, ನಾನು ಒಪ್ಪಿಕೊಂಡೆ ಇಸ್ಲಾಮ್ ಪುರ ಮೊಹಲ್ಲಾದ ಅಲೀಮ್ ರವರ ಹಳೆಯ ಹಂಚಿನ ಮನೆಯ ಒರಾಂಡಕ್ಕೆ ನಾವೆಲ್ಲರೂ ದಾಳಿ ಮಾಡಿ ಪರಿಶೀಲಿಸಿದಾಗ ಆವರಣದಲ್ಲಿ 8 ಬ್ಯಾರಲ್ ಗಳಿದ್ದು ಸೀಮೆ ಎಣ್ಣೆ ತುಂಬಿದ್ದು, ಉತ್ತರ ದಿಕ್ಕಿಗೆ 4 ಬ್ಯಾರಲ್ ಗಳಿದ್ದು ಅದರಲ್ಲಿ ಸೀಮೆ ಎಣ್ಣೆ ಇತ್ತು, ಒಬ್ಬ ವ್ಯಕ್ತಿ ಇದ್ದು ನಮ್ಮನ್ನು ಓಡಿ ಹೋದರು ಪರಿಶೀಲನೆ ಮಾಡಲಾಗಿ 4 ತಗಡಿನ ಬ್ಯಾರಲ್ ನಲ್ಲಿ ತಲಾ 200 ಲೀಟರ್ ನೀಲಿ ಸೀಮೆ ಎಣ್ಣೆ, ಎರಡು ಕಂದು ಬಣ್ಣದ 3 ತಗಡಿನ ಬ್ಯಾರಲ್ ಗಳಲ್ಲಿ ತಲಾ 200 ಲೀಟರ್ ಸೀಮ ಎಣ್ಣೆ, ಒಂ ದು ಕಂದು ಬಣ್ಣದ ತಗಡಿನ ಬ್ಯಾರಲ್ ನ ಲ್ಲಿ 200 ಲೀಟರ್ ಸೀಮೆ ಎಣ್ಣೆ, ಎರಡು ನೀಲಿ ಬಣ್ಣದ ಕ್ಯಾನ್ ನಲ್ಲಿ 25 ಲೀಟರ್ ಸೀಮೆ ಎಣ್ಣೆ, ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನ್ ಇದ್ದು 25 ಲೀಟರ್ ಸೀಮೆ ಎಣ್ಣೆ ಇತ್ತು, ಒಂದು ದುಂಡಾಕಾರಣದ ಹಸಿರು ಬಣ್ಣದ ಕ್ಯಾನ್ ನಲ್ಲಿ 25 ಲೀಟರ್ ಸೀಮೆ ಎಣ್ಣೆ, ಒಂದು ಸೀಮೆ ಎಣ್ಣೆ ಹಾಕುವ ಆಲಿಕೆ, ಒಂದು ಡ್ರಮ್ ಬಿಚ್ಚುವ ಸ್ಪಾನರ್, ಒಟ್ಟು 12 ಇದ್ದು ತಲಾ 750 ಮಿ ಲಿಯಂತೆ ಸೀಮೆ ಎಣ್ಣೆಯನ್ನು ಮಾದರಿಗಾಗಿ 12 ಗಾಜಿನ ಬಾಟಲಿಗಳಲ್ಲಿ ತುಂಬಿ ಬಳಿ ಬಟ್ಟೆಯನ್ನು ಸುತ್ತಿ ಸೀಲ್ ಹಾಕಿರುತ್ತಾರೆ, ಸ್ಥಳ ಪರಿಶೀಲಿಸಿದಾಗ ದಿಲೀಪ್ ಎಜೆನ್ಸಿ ಚನ್ನಪಟ್ಟಣದವರು ವಿತರಿಸಿರುವ 21 ಬಿಲ್ ಗಳಿದ್ದು ಸೀಮೆ ಎಣ್ಣೆ ನೀಡಿರುವುದು ಕಂಡು ಬಂತು, ಓಡಿ ಹೋದ ವ್ಯಕ್ತಿಯ ಹೆಸರನ್ನು ವಿಚಾರಿಸಲಾಗಿ ಸಾದತ್ ಬಿ ನ್ ಮೊಹಮ್ಮದ್ ಅಲಿ, ಇಸ್ಲಾಮ್ ಪುರ ಮೊಹಲ್ಲಾ ನಿಜಾಮಿ ಚೌಕ್ ಚನ್ನಪಟ್ಟಣ ಟೌನ್ ಎಂದು ತಿಳಿದು ಬಂತು, ಈ ಕುರಿತು ಈಗ ಓದಿ ಹೇಳಲಾದ ನಿಪಿ-1 ನ್ನು ನನ್ನ ಸಮಕ್ಷಮ ಪೋಲೀಸರು ಬರೆದಾಗ ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸ ರಿಯಲ್ಲ. ಈ ಕುರಿತು ತನಿಖಾದಿಕಾರಿಯವರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು.

ನಿಪಿ-1 ಮತ್ತು 3ರ ಅಂಶಗಳು ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ-**

ಏನು ಇರುವುದಿಲ್ಲ.

ಮರು ವಿಚಾರಣೆಃ- ಏನು ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು).**

**ಓ ಹೇ ಕೇ ಸ ಓ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ.ಎಫ್.ಸಿ ಚನ್ನಪಟ್ಟಣ.**